

ಉಸ್ಪೆನ್ಸ್ಕಿ ಕ್ಯಾಥೆಡ್ರಲ್

ಸಾರ್ವಜನಿಕ ಸಾರಿಗೆಗಳ ವ್ಯವಸ್ಥೆ ಇದೆ. ನಾವು ಎರಡು ಟಿಕೆಟ್ ಕೊಂಡುಕೊಂಡು, ಆಗಷ್ಟೇ ಬಂದು ನಿಂತಿದ್ದ, ಹಸಿರು ಬಣ್ಣದ ಟ್ರಾಮ್ ಹತ್ತಿ ಪಟ್ಟಣದೆಡೆಗೆ ಹೊರಟೆವು.

ಫಿನ್‌ಲ್ಯಾಂಡ್ ದೇಶದಲ್ಲಿ ಹೆಚ್ಚಾಗಿ ಫಿನ್ನಿಷ್ ಭಾಷೆಯ ಪ್ರಾಬಲ್ಯ ಇದ್ದರೂ, ಹಿಂದೆ ಈ ದೇಶ ಸ್ವೀಡಿಷ್ ರಾಜರ ಆಡಳಿತಕ್ಕೆ ಒಳಪಟ್ಟಿದ್ದರಿಂದ ಅಲ್ಲಲ್ಲಿ ಸ್ವೀಡಿಷ್ ಸಹ ಕೇಳಿಬರುತ್ತಿತ್ತು. ಟ್ರಾಮ್‌ನಲ್ಲಿ ಕೂಡ ಫಿನ್ನಿಷ್ ಜೊತೆಗೆ ಸ್ವೀಡಿಷ್ ಭಾಷೆಯ ಸೂಚನೆಗಳಿದ್ದವು. ಆ ಭಾಷೆಯ ಪರಿಚಯ ನಮಗೆ ಚೆನ್ನಾಗಿ ಇದ್ದುದ್ದರಿಂದ ಬೇರೆ ದೇಶಕ್ಕೆ ಬಂದಿಳಿದಿದ್ದೇವೆಂಬ ಭಾವನೆಯೇ ಬರಲಿಲ್ಲ.

ನಾವು ಕಾಯ್ದಿರಿಸಿಕೊಂಡಿದ್ದ ಅಪಾರ್ಟ್‌ಮೆಂಟ್‌ಗೆ ಅಲ್ಲಿನ ಮುಖ್ಯ ಬಸ್ ನಿಲ್ದಾಣದಿಂದ ಕಾಲ್ನಡಿಗೆಯ ದೂರವಷ್ಟೆ. ಎರಡು ಕೋಣೆಗಳಿದ್ದು ವಿಶಾಲವಾಗಿದ್ದ ಆ ಮನೆಯಲ್ಲಿ ಒಂದು ಸೌನಾ ಸಹ ಇತ್ತು. ನಮ್ಮ ಕಡೆ ಬಿಸಿ ಬಿಸಿ ಅಭ್ಯಂಜನ ಮಾಡುತ್ತಾರಲ್ಲಾ, ಹಾಗೆ ಇಲ್ಲಿನ ಜನಕ್ಕೆ ಬಿಸಿ ಹಬೆಯಿಂದ ಕೂಡಿದ ಸೌನಾದಲ್ಲಿ ಕುಳಿತೆದ್ದು ಬರುವುದೆಂದರೆ ಪ್ರಿಯ. ಇದು ದೇಹಕ್ಕೆ, ರಕ್ತ ಪರಿಚಲನೆಗೆ ಒಳ್ಳೆಯದಂತೆ. ಮೈ ಬೆವರುವುದರಿಂದ ಚರ್ಮಕ್ಕೂ ಒಳ್ಳೆಯದೆಂಬ ಮಾತಿದೆ.

ಊಟವಾದ ನಂತರ, ಹತ್ತಿರದಲ್ಲೇ ಇದ್ದ ಉಸ್ಪೆನ್ಸ್ಕಿ ಕ್ಯಾಥೆಡ್ರಲ್ ನೋಡಲು ಹೋದೆವು. ಇದು ಹಿಂದೆ ಫಿನ್‌ಲ್ಯಾಂಡ್ ದೇಶ ರಷ್ಯನ್ನರ ಆಡಳಿತಕ್ಕೆ ಸೇರಿದ್ದ ಕಾಲದಲ್ಲಿ, ರಷ್ಯನ್ ಶಿಲ್ಪಿಯೊಬ್ಬನಿಂದ ಕಟ್ಟಲಾಗಿತ್ತು. ಹತ್ತಿರದ ಓಲಾಂಡ್ ದ್ವೀಪದಲ್ಲಿದ್ದ, ಬೋಮರ್ಸುಂಡ್ ಕೋಟೆಯ ಕಲ್ಲುಗಳನ್ನೇ ಈ ಚರ್ಚ್‌ನ ನಿರ್ಮಾಣಕ್ಕಾಗಿ ಉಪಯೋಗಿಸಲಾಯಿತು. ನಾವು ಅಲ್ಲಿಗೆ ತಲುಪಿದ ಸಮಯದಲ್ಲಿ ಎಲ್ಲೋ ನಮ್ಮಂತೆ ಬಂದ ಒಂದೆರಡು ಪ್ರವಾಸಿಗರನ್ನು ಹೊರತುಪಡಿಸಿ ಹೆಚ್ಚಿನ ಜನರಿರಲಿಲ್ಲ. ಸಣ್ಣ ಕಲ್ಲಿನ ಗುಡ್ಡದ ಮೇಲೆ, ಕಂದು ಬಣ್ಣದ ಗೋಡೆಗಳ, ಚಿನ್ನದ ಬಣ್ಣದ ಗುಮ್ಮಟಗಳಿದ್ದ ಭವ್ಯವಾದ ಉಸ್ಪೆನ್ಸ್ಕಿ ಕ್ಯಾಥೆಡ್ರಲ್ ಅತ್ತಿತ್ತ ನಡೆಯುವುದನ್ನೆಲ್ಲ ಗಮನಿಸುತ್ತಾ ಪಹರೆಗೆ ನಿಂತಂತೆ ಕಂಡಿತು. ಒಳಗೆ ಚಿನ್ನದ ಬಣ್ಣದ ಪೂಜಾಪೀಠ, ಸಣ್ಣ ಚಿತ್ತಾರದ ಗೋಡೆಗಳು, ಗುಮ್ಮಟಗಳು, ನೆಲಗಂಬಳಿಗಳು, ತೂಗುದೀಪಗಳು ಅದರ ಭವ್ಯತೆಗೆ ಇನ್ನಷ್ಟು ಮೆರುಗು ಕೊಟ್ಟಿದ್ದವು. ಅಲ್ಲಿಂದ ಹೊರಗೆ ಬಂದರೆ ಕಾಣುತ್ತಿದ್ದ ರಾಷ್ಟ್ರಪತಿ ಭವನ, ಜನಜಂಗುಳಿಯಿದ್ದ ಮಾರುಕಟ್ಟೆ, ಶ್ವೇತವರ್ಣದ ಹೆಲ್ಸಿಂಕಿ ಕ್ಯಾಥೆಡ್ರಲ್, ವಿಶಾಲ ಸಮುದ್ರ, ತೇಲುವ ಮೋಟಾರು ಬೋಟುಗಳು ಎಲ್ಲವೂ ಹೆಲ್ಸಿಂಕಿಯ ಸ್ನಿಗ್ಧ ಸೌಂದರ್ಯವನ್ನು ಸಾರುತ್ತಿದ್ದವು.

ಪಶ್ಚಿಮದೆಡೆಗೆ ಸರಿಯುತ್ತಿದ್ದ ಸೂರ್ಯ, ತಮ್ಮ ನಿತ್ಯದ ಕೆಲಸಗಳಲ್ಲಿ ಮುಳುಗಿದ್ದ ಸ್ಥಳೀಯರ ನಡುವೆ ಅಲ್ಲಲ್ಲಿ ನಿಂತು ಕಣ್ಣರಳಿಸುತ್ತಿದ್ದ ಪ್ರವಾಸಿಗರು, ಸ್ವಚ್ಛವಾಗಿದ್ದ ರಸ್ತೆಗಳು, ಕಲ್ಲು ಹಾಸಿದ್ದ ಬೀದಿಗಳು, ಹಳೆಯ, ಹೊಸ ಕಟ್ಟಡಗಳು, ಜನರನ್ನು ಹೊತ್ತೊಯ್ಯುತ್ತಿದ್ದ ಟ್ರಾಮ್‌ಗಳು, ಬಸ್ಸುಗಳು, ಕಾರುಗಳು ಇವೆಲ್ಲ ಅಂದಿನ ಸಂಜೆಯ ಚಿತ್ರಣದ ಭಾಗವಾಗಿದ್ದವು.

ಮರುದಿನ ಹತ್ತಿರದ ಒಂದು ದ್ವೀಪದಲ್ಲಿದ್ದ ಸುವೋಮೆನ್ಲಿನ್ನ ಎನ್ನುವ ಕೋಟೆಯನ್ನು ನೋಡೋಣವೆಂದು ಹೊರಟೆವು. ಫೆರ್ರಿಯಲ್ಲಿ ಹೋಗುವುದಾದರೆ ಇದು ಕೇವಲ 20 ನಿಮಿಷಗಳ ದಾರಿಯಷ್ಟೇ. ಹಿಂದೆ ಸ್ವೀಡಿಷ್ ರಾಜರ ಆಡಳಿತದಡಿಯಲ್ಲಿ 18ನೇ ಶತಮಾನದಲ್ಲಿ ಕಟ್ಟಲಾಗಿದ್ದ ಇದು ಸ್ವೀಬೊರಿ (ಸ್ವೀಡನ್‌ನ ಕೋಟೆ) ಎಂಬ ಹೆಸರಿನಿಂದ ಕರೆಯಲ್ಪಡುತ್ತಿತ್ತು. ಸುತ್ತಮುತ್ತಲಿನ ಜಲಮಾರ್ಗಗಳ ಮೇಲೆ ಕಾವಲಿಡಲು ಆಯಕಟ್ಟಾದ ಸ್ಥಳವೆನಿಸಿತ್ತು. ನಂತರದಲ್ಲಿ ರಷ್ಯನ್ನರು ಇದನ್ನು ವಶಪಡಿಸಿಕೊಂಡು ಸುಮಾರು ನೂರು ವರ್ಷಗಳ ಕಾಲ ತಮ್ಮ ಹಿಡಿತದಲ್ಲಿಟ್ಟುಕೊಂಡಿದ್ದರು. ಮುಂದೆ 20ನೇ ಶತಮಾನದಲ್ಲಿ ಫಿನ್‌ಲ್ಯಾಂಡ್‌ಗೆ ಸ್ವಾತಂತ್ರ್ಯ ಸಿಕ್ಕಿದ ಮೇಲೆ ಈ ಕೋಟೆ ಸುವೋಮೆನ್ಲಿನ್ನ (ಫಿನ್‌ಲ್ಯಾಂಡ್‌ನ ಕೋಟೆ) ಎಂದು ಮರು ನಾಮಕರಣಗೊಂಡಿತು. ಇದೀಗ ಯುನೆಸ್ಕೋ ವಿಶ್ವಪರಂಪರೆಯ ಪಟ್ಟಿಗೆ ಸೇರಿದೆ.

ಬಾಲ್ಟಿಕ್ ಸಮುದ್ರದ ತಿಳಿ ನೀಲಿ ನೀರಿನ ಮೇಲೆ ನಾವಿದ್ದ ಫೆರ್ರಿ ತೇಲುತ್ತ ಮುಂಬರಿಯುತ್ತಿತ್ತು. ಅದರಲ್ಲಿ ಹೆಚ್ಚಿನ ಸ್ಥಳೀಯರೇ ಇದ್ದು ಆಗಾಗ ಸ್ವೀಡಿಷ್, ಫಿನ್ನಿಷ್ ಭಾಷೆ ಕೇಳಿಬರುತ್ತಿತ್ತು. ಇಂಗ್ಲಿಷ್ ಬಳಕೆಯೆಲ್ಲ ಕಡಿಮೆಯೇ. ಇಂಗ್ಲಿಷ್‌ನಲ್ಲಿ ಮಾತನಾಡಿಸಿದರೆ ಆ ಭಾಷೆ ತಿಳಿದಿದ್ದರೂ, ಗೊತ್ತಿಲ್ಲವೆಂದು ಹೇಳುವವರೆಷ್ಟೋ ಜನ. ಯೂರೋಪಿನ ಹಲವು ದೇಶಗಳಲ್ಲಿ ಆಂಗ್ಲ ಭಾಷೆಗೆ ಅಂತಹ ಪ್ರಾಧಾನ್ಯ ಇಲ್ಲ. ಹೀಗೆ ಸ್ಥಳೀಯ ಭಾಷೆಯ ಸೊಗಡನ್ನು, ಅದರ ರಾಗಾಲಾಪಗಳನ್ನು ಕೇಳುತ್ತಾ ದಾರಿ ಸಾಗಿದ್ದೇ ತಿಳಿಯಲಿಲ್ಲ. ಫೆರ್ರಿ ನಮ್ಮನ್ನು ಕೋಟೆ ಇದ್ದ ದ್ವೀಪಕ್ಕೆ ತಂದು ಇಳಿಸಿತು. ಅಲ್ಲಿಂದ ಕೋಟೆಯೊಳಗೆ ಜೆಟ್ಟಿ ಬಾರಾಕ್ಸ್ ಎಂಬ ಹೆಸರಿನ



ವನಯವೆಸಿ ಕೆರೆ